

ಎಲ್ಲರ ಹಂಗಿಸುವಿಕೆಯ ನಡುವೆ ಯಾರಿಗೂ ನಾನು ತೆರೆದುಕೊಳ್ಳಲೇ ಇಲ್ಲ. ಮಗು ನನ್ನನ್ನು ಹೆಚ್ಚು ಹಚ್ಚಿಕೊಂಡಿರಲಿಲ್ಲ ಅನ್ನುವುದೇನೋ ನಿಜ. ಆದರೆ, ಅಪ್ಪಿಹಿಡಿದು, ಕಣ್ಣುಮುಚ್ಚಿ ಮೊಲೆಯುಣ್ಣುವ ಹೊತ್ತಿನ ಆ ಆಪ್ತ ಸ್ಪರ್ಶಸುಖ ಮರೆಯಬಲ್ಲೆನೇ? ಅವನು ನನಗೆ ಬಸಿರು, ತಾಯ್ತನದ ಅರಿವನ್ನು ಪರಿಚಯಿಸಿದ ನನ್ನ ಕಂದನಾಗಿದ್ದ. ಅವನ ಮರಣದ ದಾರುಣತೆಗೆ ಅಮ್ಮನಾದ ನಾನು ಸಾಕ್ಷಿ. ಎಂತಹ ಕ್ರೂರ ವಿಧಿ. ಎಲ್ಲೋ ದೂರದ ದಿಗಂತದೆಡೆ ದೃಷ್ಟಿ ನೆಟ್ಟು ಗಂಟೆಗಟ್ಟಲೆ ಕುಳಿತಿರುತ್ತಿದ್ದೆ. ಕಂಡವರೆಲ್ಲಾ ನನಗೆ ಭ್ರಾಂತು ಅಂದರು. ನಾನು ಅನುಭವಿಸುತ್ತಿದ್ದ ಶಾರೀರಿಕ ನೋವು ಮತ್ತು ಮಾನಸಿಕ ನೋವು ನನ್ನವರನ್ನು ಪ್ರತೀ ಕ್ಷಣ ಅವರು ಮಾಡಿದ ಕೃತ್ಯದ ನೆನಪು ಹುಟ್ಟಿಸಿ ಪಶ್ಚಾತ್ತಾಪದಿಂದ ಬೇಯುವಂತೆ ಮಾಡುತ್ತಿತ್ತು. ನಿಜವಾಗಿ ಹೇಳಬೇಕೆಂದರೆ ಹಿರಿಯರು, ಆಗಿನ್ನು ಅಂಗಳದಲ್ಲಿ ಕುಂಟಾಬಿಲ್ಲೆ ಆಡುತ್ತಿದ್ದ ನನ್ನನ್ನು ಮದುವೆ ಮಾಡಿದ್ದೇ ತಪ್ಪಾಗಿತ್ತು. ನನಗೂ ಈ ಬಸಿರು, ಹೆರಿಗೆ ಬಾಣಂತನ ಕಟ್ಟುನಿಟ್ಟು ಸಾಕಾಗಿತ್ತು. ಮಗುವಿನ ಮೇಲೆ ಪ್ರೀತಿ ಇದ್ದೇ ಇತ್ತು. ಆದರೂ ಕೆಲವೊಮ್ಮೆ ಅದನ್ನು ಸಂಭಾಳಿಸುವುದಕ್ಕೆ ಸೋತು ಹೋಗುತ್ತಿದ್ದೆ. ನನ್ನ ವಯಸ್ಸಿನವರು ಸ್ವತಂತ್ರವಾಗಿ ಹಾಯಾಗಿರುವಾಗ ಅವರ ಜೊತೆ ಸೇರಿಬಿಡುತ್ತಿದ್ದೆ. ಆದರೆ, ನನ್ನ ಮುಗ್ಧತನಕ್ಕೆ ದೊರೆತ ಶಿಕ್ಷೆ ಮಾತ್ರ ಕಠೋರವಾಗಿತ್ತು. ನನ್ನವರು ನನಗೆ ಬುದ್ಧಿ ಹೇಳಬಹುದಿತ್ತು, ಗದರಬಹುದಿತ್ತು. ಅವರೂ ಒಂದಿಷ್ಟು ಎಚ್ಚರವಹಿಸಬಹುದಿತ್ತು. ಆದರೆ, ಅವರು ಕೋಪದ ಕೈಗೆ ಬುದ್ಧಿಯನ್ನು ಕೊಟ್ಟರು. ಮತ್ತೆಂದೂ ಅವರು ನನ್ನನ್ನ ಒಂದಿನಿತೂ